Date: 12-11-2022

**ಪತ್ರಿಕಾ ಪ್ರಕಟಣೆ:**

# ವಿನ್ಯಾಸ ತಂತ್ರಾಂಶ " ಆಟೋ ಡೆಸ್ಕ್" ಕುರಿತು ಕಾರ್ಯಾಗಾರ

ಕೆ. ಎಲ್. ಎಸ್. ವಿ. ಡಿ. ಐ. ಟಿ. ಹಳಿಯಾಳದಲ್ಲಿ ಯಾಂತ್ರಿಕ ವಿನ್ಯಾಸಕ್ಕೆ ಪೂರಕವಾಗುವ ತಂತ್ರಾಂಶವಾದ ಆಟೋ ಡೆಸ್ಕ್ ಕುರಿತು ಒಂದು ದಿನದ ಕಾರ್ಯಾಗಾರವನ್ನು ನವೆಂಬರ್ 10ರಂದು ಆಯೋಜಿಸಲಾಗಿತ್ತು. ಬೆಂಗಳೂರಿನ ಐ. ಸಿ. ಟಿ. ಅಕಾಡೆಮಿಯ ಶ್ರೀ. ಡಿ. ರವಿಚಂದ್ರನ್ ಅವರು ಮಹಾವಿದ್ಯಾಲಯದ ಮೆಕ್ಯಾನಿಕಲ್ ವಿಭಾಗದ 80ಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ಆಟೋ ಡೆಸ್ಕ್ ಫ್ಯೂಷನ್ 360 ತಂತ್ರಾಂಶದ ಕುರಿತು ಪ್ರಾಯೋಗಿಕ ತರಬೇತಿಯನ್ನು ನೀಡಿದರು. ಈ ತಂತ್ರಾಂಶವು ಆಟೋಮೊಬೈಲ್ ವಿನ್ಯಾಸಗಳನ್ನು ಮಾಡಲು ಸಹಕಾರಿಯಾಗಿದ್ದು, ಮೆಕ್ಯಾನಿಕಲ್ ವಿಭಾಗದ ವಿದ್ಯಾರ್ಥಿಗಳು ಆಟೋ ಡೆಸ್ಕ್ ನಲ್ಲಿ ಪರಿಣಿತಿ ಪಡೆದರೆ ಹೆಚ್ಚಿನ ಉದ್ಯೋಗಾವಕಾಶಗಳು ದೊರೆಯಲಿವೆ ಎಂದು ಪ್ರಾಚಾರ್ಯರಾದ ಡಾ. ವಿ. ಎ. ಕುಲಕರ್ಣಿ ಅವರು ಹೇಳಿದರು. ಮೆಕ್ಯಾನಿಕಲ್ ವಿಭಾಗದ ಮುಖ್ಯಸ್ಥರಾದ ಪ್ರೊ. ಎಸ್. ಡಿ. ಕುಲಕರ್ಣಿ ಅವರು ಮೆಕ್ಯಾನಿಕಲ್ ವಿಭಾಗದ ವಿದ್ಯಾರ್ಥಿಗಳ ಕೌಶಲ್ಯ ಅಭಿವೃದ್ಧಿಗೆ ಪೂರಕವಾಗುವ ಕಾರ್ಯಗಾರಗಳನ್ನು ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಾಗಿ ಆಯೋಜಿಸಲಾಗುವುದು ಎಂದು ಹೇಳಿದರು.ಟ್ರೈನಿಂಗ್ ಮತ್ತು ಪ್ಲೇಸ್ಮೆಂಟ್ ವಿಭಾಗದ ಸಂಚಾಲಕರಾದ ಪ್ರೊ. ರಜತ್ ಆಚಾರ್ಯ ಕಾರ್ಯಕ್ರಮ ಸಂಯೋಜಿಸಿದ್ದರು.

ಪ್ರಾಂಶುಪಾಲರು

Principal
KLS Vishwanathrao Deshpande
Institute of Technology, Haliyal

